# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1272
2. ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 29.12.2022
4. ಉತ್ತರಿಸಲಿರುವ ಸಚಿವರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಗೆ ಸರ್ಕಾರದ ಉಸ್ತುವಾರಿ ಸಚಿವರನ್ನು ನೋಡಲ್ ಕಾರ್ಯದರ್ಶಿ ಯವರನ್ನುನೇಮಕ ಮಾಡಲಾಗಿದೆಯೇ; | ಶ್ರೀ ಶಂಕರ್ ಬಿ. ಪಾಟೀಲ್ ಮುನೇನಕೊಪ್ಪ, ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಸಕ್ಕರೆ, ಕಬ್ಬು ಅಭಿವೃದ್ಧಿ ಸಚಿವರು ಇವರನ್ನು ರಾಯಚೂರು ಮತ್ತು ಬೀದರ್ ಜಿಲ್ಲೆಗಳ ಉಸ್ತುವಾರಿ ಸಚಿವರನ್ನಾಗಿ ದಿನಾಂಕ:24.01.2022ರ ಅಧಿಸೂಚನೆ ಸಂಖ್ಯೆ: ಪಿಡಿಎಸ್ 07 ಕೆಡಿಪಿ 2022ರಲ್ಲಿ ನೇಮಿಸಿ ಆದೇಶಿಸಲಾಗಿರುತ್ತದೆ.<br>ಬೀದರ್ ಜಿಲ್ಲೆಗೆ ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ ರವರನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಇವರುಗಳ ಕಾರ್ಯ ವೈಖರಿಗಳು ಹಾಗೂ ಅವರುಗಳು ಜಿಲ್ಲೆಗೆ ಬಂದು ಭೇಟಿ ನೀಡುವ ವಿಷಯಗಳಿಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳಿಗೆ ಹಾಗೂ ಸಾರ್ವಜನಿಕರಿಗೆ ಯಾರ ಮುಖಾಂತರ ಸರ್ಕಾರ ಮಾಹಿತಿ ನೀಡುವುದು; | ಉಸ್ತುವಾರಿ ಸಚಿವರುಗಳು/ನೋಡಲ್ ಕಾರ್ಯದರ್ಶಿಗಳು ನೇಮಿಸಲ್ಪಟ್ಟ ಜಿಲ್ಲೆಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ಉಸ್ತುವಾರಿ ಮಾಡಬಹುದಾಗಿದ್ದು, ಅವರುಗಳು ಜಿಲ್ಲೆಗೆ ಭೇಟಿ ನೀಡುವ ಸಂದರ್ಭದಲ್ಲಿ ತಮ್ಮ ಪ್ರವಾಸದ ಕುರಿತಾದ ವಿವರಗಳನ್ನು (ಸ್ಥಳ, ದಿನಾಂಕ ಹಾಗೂ ಸಮಯ) ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡುತ್ತಿದ್ದು, ಜಿಲ್ಲಾಧಿಕಾರಿಗಳ ಕಛೇರಿಯಿಂದ ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದ್ದು, ಮೊದಲಿನಿಂದಲೂ ಇದೇ ಪ್ರಕ್ರಿಯೆ ಚಾಲನೆಯಲ್ಲಿದೆ. |
| ಇ) | ಮಾಹಿತಿ ನೀಡಿದ್ದಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು? | ಪ್ರತಿ ಕುಂದುಕೊರತೆ ನಿವಾರಣೆಯನ್ನು ಸಂಬಂಧಪಟ್ಟ ಅಧಿಕಾರಿ ಮೂಲಕ ಮಾಡಲಾಗುತ್ತಿದೆ. |

**ಸಂಖ್ಯೆ: ಪಿಡಿಎಸ್ 65 ಎಸ್‌ಪಿಬಿ 2022**

(ಬಸವರಾಜ ಬೊಮ್ಮಾಯಿ)

ಮುಖ್ಯ ಮಂತ್ರಿ